ಹುಕ್ಕೇರಿ ತಾಲ್ಲೂಕಿನ ಮಾರ್ಕಂಡೇಯ ಏತ ನೀರಾವರಿ ಯೋಜನೆ

2467(2771) ಶ್ರೀ ಉಮೇಶ್ ವಿಶ್ವನಾಥ ಕತ್ತಿ (ಹುಕ್ಕೇರಿ) :— ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾ:ಕಿನ ಮಾರ್ಕಂಡೇಯ ಏತ ನೀರಾವರಿ ಯೋಜನೆಯ ಪ್ರಸ್ತಾವನೆಯು ಸರ್ಕಾರದ ಮಂಜೂರಾತಿಗಾಗಿ ಬಂದಿದೆಯೇ? ಬಂದಿದ್ದಲ್ಲಿ ಮಂಜೂರಾಗಿದ್ದು ಯಾವಾಗ?

ಆ) ಈ ಯೋಜನೆಯ ವೆಚ್ಚವೆಷ್ಟು? ಆ ಭಾಗದ ರೈತರ ಹಿತದೃಷ್ಟಿಯಿಂದ ಈ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗುವುದು. ಹಾಗೂ ಈ ಯೋಜನೆಯನ್ನು ಪೂರ್ಣಗೊಳಿಸಲು ಹಾಕಿಕೊಂಡಿರುವ ಕಾಲಬದ್ಧ ಯೋಜನಾ ರೂಪರೇಷೆಗಳೇನು?

ಶ್ರೀ ಎಚ್.ಕೆ ಪಾಟೀಲ್ (ಜಲಸಂಪನ್ಮೂಲ ಸಚಿವರು) :—

ಅ) ಬಂದಿದೆ.

ಪ್ರಸ್ತಾಪಿತ ಇಸ್ಲಾಂಪುರ - ಷಹಾ ಬಂದರ ಏತ ನೀರಾವರಿ ಯೋಜನೆಗೆ ಬೇಕಾಗುವ 0.30 ಟಿಎಂಸಿ ಹೆಚ್ಚುವರಿ ನೀರು ಸ್ಕೀಂ 'ಎ' ಅಡಿ ಲಭ್ಯವಿರುವುದಿಲ್ಲ. ಆದಾಗ್ಯೂ ಈ ಯೋಜನೆಗೆ ಬೇಕಾಗುವ ನೀರನ್ನು ಸ್ಕೀ 'ಬ' ಅಡಿಯಲ್ಲಿ ಒದಗಿಸಲು ಉದ್ದೇಶಿಸಲಾಗಿದೆ. ಸ್ಕೀಂ 'ಬ' ಜಾರಿಗೆ ಬಂದಾಗ ಈ ಯೋಜನೆಗೆ ಮಂಜೂರಾತಿ ನೀಡಲಾಗುವುದು.

ಆ) ಈ ಯೋಜನೆಯ ಅಂದಾಜು ವೆಚ್ಚವು ರೂ.470 ಲಕ್ಷಗಳೆಂದು ಅಂದಾಜಿಸಲಾಗಿದೆ. ಮಾರ್ಕಂಡೇಯ ಆಣೆಕಟ್ಟು ಪೂರ್ಣಗೊಂಡ ನಂತರ ಈ ಸ್ಕೀಂ 'ಬ' ಜಾರಿಗೆ ಬಂದ ನಂತರ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದು.

ಬೆಳಗಾವಿ ಜಿಲ್ಲೆಯ ಹುಕ್ಕೇರಿಯಲ್ಲಿ ಅಗ್ನಿಶಾಮಕ ದಳ ಮಂಜೂರಾತಿ

2468(2772) ಶ್ರೀ ಉಮೇಶ್ ವಿಶ್ವನಾಥ ಕತ್ತಿ (ಹುಕ್ಕೇರಿ) :— ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಳಗಾವಿ ಜಿಲ್ಲೆಯ ಹುಕ್ಕೇರಿಯಲ್ಲಿ ಅಗ್ನಿಶಾಮಕ ಠಾಣೆ ಮಂಜೂರಾಗಿರುವುದು ನಿಜವೇ? ನಿಜವಾದಲ್ಲಿ ಯಾವಾಗ ಮಂಜೂರಾಗಿದೆ.

ಆ) ಮಂಜೂರಾಗಿದ್ದಲ್ಲಿ ಎಂದಿನಿಂದ ಪ್ರಾರಂಭಿಸಲಾಗುವುದು; ಇಷ್ಟು ದಿನಗಳಿಂದದ ಪ್ರಾರಂಭಿಸದೇ ಇರಲು ಇರುವ ತೊಂದರೆ ಏನು ಕಾರಣಗಳನ್ನು ನೀಡುವುದು?